ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ (ಕಾರ್ಮಿಕ ನ್ಯಾಯಾಲಯ)
ಉಡುಪಿ

Ref.10.1.C.OF ID ACT No.11/2021 ಆರ್.ಡಬ್ಲ್ಯು: 1

| | |
|---|---|
| ಸಾಕ್ಷಿದಾರರ ಹೆಸರು | ಕೆ .ನಿಕೇಶ್ ಶೆಟ್ಟಿ |
| ತಂದೆಯ ಹೆಸರು | ಪಿ . ವಿಶ್ವನಾಥ ಶೆಟ್ಟಿ |
| ವಯಸ್ಸು | 49 ವರ್ಷ |
| ಉದ್ಯೋಗ | ವಕೀಲರು, ಮಂಗಳೂರು |
| ವಿಳಾಸ | ಮಂಗಳೂರು |

ದಿನಾಂಕ: 21-09-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು

**ಮುಂದುವರಿದ ಮುಖ್ಯ ವಿಚಾರಣೆ: ಎದುರುದಾರರ ಪರ ಶ್ರೀ ಎ.ಕೆ.ಬಿ ವಕೀಲರಿಂದ**

ನಾನು ಈದಿನ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ನಿಜ ಇರುತ್ತದೆ. ಅದರಲ್ಲಿರುವ ಸಹಿ ನನ್ನದೇ ಇರುತ್ತದೆ. ನಾನು ಅರ್ಜಿಯ ಜೊತೆಯಲ್ಲಿ ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ.

1.ದಿನಾಂಕ 20-11-2019 ರಂದು ಅಮರನಾಥ ಎನ್ನುವಾತ ಎದುರುದಾರ ಆಡಳಿತ ಮಂಡಳಿಯವರಿಗೆ ಕೊಟ್ಟ ಪತ್ರ ಹಾಜರುಪಡಿಸಿದ್ದೇನೆ ಅದನ್ನು ನಿಶಾನೆ ಆರ್ - 1 ಎಂದು ಗುರುತಿಸಿತು.

2. ಸತೀಶ ಪೂಜಾರಿ ಎನ್ನುವಾತ ದಿನಾಂಕ 29-11-2019 ರಂದು ಎದುರುದಾರ ಆಡಳಿತ ಮಂಡಳಿಯವರಿಗೆ ಕೊಟ್ಟ ಪತ್ರ ಹಾಜರುಪಡಿಸಿದ್ದೇನೆ ಅದನ್ನು ನಿಶಾನೆ ಆರ್ - 2 ಎಂದು ಗುರುತಿಸಿತು.

3. ಎದುರುದಾರ ಅಡಳಿತ ಮಂಡಳಿ ಅರ್ಜಿದಾರನಿಗೆ ಕಾರಣ ಕೇಳಿ ಕೊಟ್ಟ ನೋಟಿಸು ಮತ್ತು ಅಮಾನತು ಆದೇಶ ಹಾಜರುಪಡಿಸಿದ್ದೇನೆ ಅದನ್ನು ನಿಶಾನೆ ಆರ್ - 3 ಎಂದು ಗುರುತಿಸಿತು.

4. ನಿಶಾನೆ ಆರ್ -3 ಕ್ಕೆ ಅರ್ಜಿದಾರ ಕೊಟ್ಟ ಉತ್ತರ ಹಾಜರುಪಡಿಸಿದ್ದೇನೆ ಅದನ್ನು ನಿಶಾನೆ ಆರ್ - 4 ಎಂದು ಗುರುತಿಸಿತು.

5. ದಿನಾಂಕ 18-12-2019 ರಂದು ಅರ್ಜಿದಾರನಿಗೆ ನೀಡಿದ ಅಪಾದನಾ ಪತ್ರ ಮತ್ತು ವಿಚಾರಣೆಯ ನೋಟಿಸು ಹಾಜರುಪಡಿಸಿದ್ದೇನೆ ಅದನ್ನು ನಿಶಾನೆ ಆರ್ - 5 ಎಂದು ಗುರುತಿಸಿತು.

6. ಸದರಿ ಅಪಾದನಾ ಪತ್ರ ಜಾರಿಯಾದ ಬಗ್ಗೆ ಅಂಚೆ ಸ್ವೀಕೃತಿ ಪತ್ರ ಹಾಜರುಪಡಿಸಿದ್ದೇನೆ ಅದನ್ನು ನಿಶಾನೆ ಆರ್ - 6 ಎಂದು ಗುರುತಿಸಿತು.

7. ಸದರಿ ಅಪಾದನಾ ಪತ್ರಕ್ಕೆ ಅರ್ಜಿದಾರ ನೀಡಿದ ರಕ್ಷಣಾತ್ಮಕ ವರದಿ ಹಾಜರುಪಡಿಸಿದ್ದೇನೆ ಅದನ್ನು ನಿಶಾನೆ ಆರ್ - 7 ಎಂದು ಗುರುತಿಸಿತು.

8. ನಿಶಾನೆ ಆರ್- 7 ರೊಡನೆ ಅರ್ಜಿದಾರ ಲಗತ್ತಿಸಿದ್ದ ವೈದ್ಯಕೀಯ ಪ್ರಮಾಣ ಪತ್ರ ಹಾಜರುಪಡಿಸಿದ್ದೇನೆ ಅದನ್ನು ನಿಶಾನೆ ಆರ್ - 8 ಎಂದು ಗುರುತಿಸಿತು.

9. ಅರ್ಜಿದಾರನ ಮೇಲೆ ನಾನು ನಡೆಸಿದ ತನಿಖಾ ವಿಚಾರಣೆಯ ನಡಾವಳಿ ಹಾಜರುಪಡಿಸಿದ್ದೇನೆ ಅದನ್ನು ನಿಶಾನೆ ಆರ್ - 9 ಎಂದು ಗುರುತಿಸಿತು.

10. ಎದುರುದಾರ ಸಂಸ್ಥೆಗೆ ನಾನು ಸಲ್ಲಿಸಿದ್ದ ತನಿಖಾ ವರದಿ ಹಾಜರುಪಡಿಸಿದ್ದೇನೆ ಅದನ್ನು ನಿಶಾನೆ ಆರ್ - 10 ಎಂದು ಗುರುತಿಸಿತು.

11. ವಿಚಾರಣೆ ಸಮಯದಲ್ಲಿ ಅರ್ಜಿದಾರ ಮತ್ತು ಎದುರುದಾರ ಸಂಸ್ಥೆ ಹಾಜರುಪಡಿಸಿದ ಇತರ ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಅವುಗಳನ್ನು ಒಟ್ಟಾಗಿ ನಿಶಾನೆ ಆರ್ - 11 ಎಂದು ಗುರುತಿಸಿತು.

**ಪಾಟಿಸವಾಲುಃ ಅರ್ಜಿದಾರರ ವಕೀಲರ ಮನವಿಯ ಮೇರೆಗೆ ಪಾಟಿಸವಾಲನ್ನು ಮುಂದೂಡಲಾಗಿದೆ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಶಾಂತವೀರ ಶಿವಪ್ಪ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,
ಉಡುಪಿ